**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಲಿಂಗಪ್ಪ ಅಣಜಿ | ಸಿಡಬ್ಲ್ಯೂ | 1 |
| ತಂದೆ ಹೆಸರು | ಬಸವರಾಜ | ಪಿಡಬ್ಲ್ಯೂ | 1 |
| ವಯಸ್ಸು | 25 ವರ್ಷ | | |
| ಉದ್ಯೋಗ | ಶೇತ್ಕರಿ | | |
| ವಾಸಸ್ಥಳ | ಗಣಜೂರ | | |

**ದಿಃ 01.04.2024 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1).** ಚಾ.ಸಾ-7 ತಂದೆ, ಚಾ.ಸಾ-8 ನನ್ನ ತಾಯಿ. ಚಾ.ಸಾ-6 ನನ್ನ ಅಜ್ಜಿ. ಆಕೆ ನನ್ನನ್ನು ದತ್ತು ಪಡೆದಿದ್ದಾರೆ. ನಾನು ಅವರ ದತ್ತಕ ಮಗ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಆರೋಪಿತರಿಗೂ ಮತ್ತು ನಮಗೂ ಜಮೀನಿನ ವಿಚಾರವಾಗಿ ತಹಶೀಲ್ದಾರ ಕಚೇರಿಯಲ್ಲಿ ಪ್ರಕರಣ ಇದ್ದು, 2022 ರ 12ನೇ ತಾರೀಖಿನಂದು ಪ್ರಕರಣ ಸಂಬಂಧ ತಹಶೀಲ್ದಾರ ಕಛೇರಿಗೆ ಹೋಗಿದ್ದೇವು. ತಿಂಗಳು ನೆನಪಿಲ್ಲ. ನಾನು, ಚಾ.ಸಾ-6 ಮತ್ತು ಚಾ.ಸಾ-7 ರವರು ತಹಶೀಲ್ದಾರ ಕಛೇರಿಗೆ ಹೋಗಿದ್ದೇವು. ಮಧ್ಯಾಹ್ನ 02-00 ಘಂಟೆಯಲ್ಲಿ ನಾನು ಹೊರಗಡೆ ಬಂದೆ, ಚಾ.ಸಾ-6 ಮತ್ತು ಚಾ.ಸಾ-7 ರವರು ಕಛೇರಿ ಒಳಗಡೆ ಇದ್ದರು. ಆರೋಪಿತರು ದ್ವಿಚಕ್ರ ವಾಹನದಲ್ಲಿ ಬಂದು ತಹಶೀಲ್ದಾರ ಕಚೇರಿಯ ಗೇಟಿನ ಬಳಿ ವಾಹನವನ್ನು ನಿಲ್ಲಿಸಿ ಕಚೇರಿಯ ಒಳಗಡೆ ಹೋದರು. ನನ್ನ ತಂದೆಯ ಚೀರಾಡಿದ ಶಬ್ದ ಕೇಳಿ ಒಳಗಡೆ ಹೋದೆ. ಆಗ 2 ನೇ ಆರೋಪಿ ನನ್ನ ತಂದೆಯ ಕೊರಳಪಟ್ಟಿ ಹಿಡಿದುಕೊಂಡಿದ್ದ, 1 ನೇ ಆರೋಪಿ ನನ್ನ ತಂದೆಗೆ ಜಾಡಿಸಿ ಒದೆಯುತ್ತಿದ್ದ. ನನ್ನ ತಂದೆಯನ್ನು ಬಿಡಿಸಿಕೊಳ್ಳುವಷ್ಟರಲ್ಲಿ ನನ್ನ ಅಜ್ಜಿ ಚಾ.ಸಾ-6 ರವರನ್ನು ಆರೋಪಿತರು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋದರು.

**2)** ನನ್ನ ತಂದೆಗೆ ಕೈ ಮುರಿದಿತ್ತು, ಎದೆಗೆ, ತಲೆಗೆ ಪೆಟ್ಟಾಗಿತ್ತು. ನಂತರ ನಾನು ನನ್ನ ತಂದೆಯನ್ನು ಕರೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಹೋದೆ. ನನ್ನ ತಾಯಿ ಬಂದ ನಂತರ ನಾನು ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ದೂರನ್ನು ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ ಮಾರನೇ ದಿನ ನನ್ನ ಅಜ್ಜಿಯನ್ನು ಪೊಲೀಸರು ಪೊಲೀಸ ಠಾಣೆಗೆ ಕರೆದುಕೊಂಡು ಬಂದಿದ್ದರು. ನನ್ನ ಅಜ್ಜಿಯನ್ನು ಕೇಳಿದಾಗ ಜಲ್ಲಾಪುರದಲ್ಲಿರುವ ಶಾಂತವ್ವ ಎಂಬುವವರ ಮನೆಗೆ ಕರೆದುಕೊಂಡು ಹೋಗಿದ್ದರು

ಎಂದು ಹೇಳಿದರು. ದೂರು ಕೊಟ್ಟ ಮಾರನೇ ದಿನ ಪೊಲೀಸರು ತಹಶೀಲ್ದಾರ ಕಛೇರಿಯಲ್ಲಿ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ. ನಾನೇ ಸ್ಥಳವನ್ನು ತೋರಿಸಿದ್ದೇನೆ. ಪೋಟೋಗಳನ್ನು ತೆಗೆದು, ಕಚ್ಚಾ ನಕಾಶೆಯನ್ನು ತಯಾರಿಸಿದ್ದಾರೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸ್ಥಳ ಪಂಚನಾಮೆಯನ್ನು ಗುರುತಿಸಿದ್ದು, ಅದನ್ನು ನಿ.ಪಿ-2 ಎಂದು,ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿ.ಪಿ-3 ಎಂದು, ಪೋಟೋವನ್ನು ನಿ.ಪಿ-4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಅನುಮತಿ ನೀಡಲಾಯಿತು).

<u>ಪಾಟೀ ಸವಾಲುಃ ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರಿಂದಃ</u>

**3)** ಆರೋಪಿತರು ನನಗೆ ಮತ್ತು ನನ್ನ ತಂದೆಗೆ ಮುದಕಿ ಆಸ್ತಿ ಬೇಕಾ ಎಂದು ಅವಾಚ್ಯ ಶಬ್ದಗಳಿಂದ ಬೈದರು ಅಂದರೆ ಸರಿ. ಆಸ್ತಿ ವಿಚಾರಕ್ಕೆ ಬಂದರೆ ನಿಮ್ಮನ್ನು ಜೀವಂತ ಬಿಡುವದಿಲ್ಲ ಎಂದು ಜೀವದ ಬೆದರಿಕೆ ಹಾಕಿದರು ಅಂದರೆ ಸರಿ. ಮುದುಕಿಯನ್ನು ಕಿಡ್ನಾಪ ಮಾಡಿಕೊಂಡು ಹೋದರೆ ಏನು ಮಾಡಿಕೊಳ್ಳುತ್ತಿರೋ, ಮಾಡಿಕೊಳ್ಳಿ ಎಂದು ಹೇಳಿ ನನ್ನ ಅಜ್ಜಿಯನ್ನು ಅಪಹರಣ ಮಾಡಿದರು ಅಂದರೆ ಸರಿ. ತಹಶೀಲ್ದಾರ ಕಚೇರಿಯಿಂದ ನನ್ನ ಅಜ್ಜಿಯನ್ನು ದ್ವಿಚಕ್ರ ವಾಹನದಲ್ಲಿ ಅಪಹರಣ ಮಾಡಿಕೊಂಡು, ಹಳೇ ಪಿ.ಬಿ ರಸ್ತೆಯಲ್ಲಿರುವ ಬೈಪಾಸ ಬ್ರಿಡ್ಜ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಂದ ಕಾರ ನಂಬರಃ ಕೆಎ-27/ಎನ್-7654 ಕಾರಿನಲ್ಲಿ ಅಪಹರಣ ಮಾಡಿಕೊಂಡು ಜಲ್ಲಾಪುರ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ.ಎ.ಎ.ಪಿ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇರುವದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.